# ಒಂದು ಪತ್ರದ ಸುತ್ತಮುತ್ತ

ಸ್ವಾಮಿ ಕರುಣಾಕರಾನಂದ

[ಸ್ವಾಮಿ ವಿವೇಕಾನಂದರಿಗೆ ಭಾರತದ ಆಧ್ಯಾತ್ಮಿಕ ಪರಂಪರೆಯನ್ನು ಉಳಿಸಿ, ಬೆಳೆಸುವುದರ ಬಗ್ಗೆ ಎಷ್ಟು ಕಾಳಜಿ ಇತ್ತೊ, ಭಾರತವು ತಾಂತ್ರಿಕ ಜ್ಞಾನವನ್ನು ವಿದೇಶಗಳಿಂದ ಪಡೆದು ತನ್ನ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕೆಂಬ ತವಕವೂ ಅಷ್ಟೆ ಇತ್ತು. ಅವರ ವ್ಯಕ್ತಿತ್ವದ ಈ ಮುಖವನ್ನು ತಮ್ಮ ಆಳವಾದ ಸಂಶೋಧನೆಗಳಿಂದ ಬೆಳಕಿಗೆ ತಂದ ಕೀರ್ತಿ ಶ್ರೀ ಶಂಕರೀ ಪ್ರಸಾದ್ ಬಸು ಅವರಿಗೆ ಸಲ್ಲಬೇಕು. "ಒಂದು ಪತ್ರದ ಸುತ್ತ ಮುತ್ತ" ಎಂಬುದು ಶ್ರೀ ಶಂಕರೀಪ್ರಸಾದ್ ಬಸು ಅವರ "Vivekananda, Nivedita and Tata's Research Scheme I & II "ಪ್ರಬುದ್ಧ ಭಾರತ" ಅಕ್ಟೋಬರ್ ನವೆಂಬರ್ ೧೯೭೮ರಲ್ಲಿ ಪ್ರಕಟಗೊಂಡ ಲೇಖನಗಳನ್ನು ಆಧರಿಸಿದ ಈ ದೀರ್ಘ ಪ್ರಬಂಧದ ಲೇಖಕರಾದ ಸ್ವಾಮಿ ಕರುಣಾಕರಾನಂದಜಿಯವರು, ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವವರು. ಸ್ವಾಮಿಜಿಯನ್ನು ಕುರಿತು ಶ್ರೀ ಶಂಕರೀಪ್ರಸಾದ್ ಬಸು ನಡೆಸಿದ ಆಳವಾದ ಅಧ್ಯಯನವನ್ನು ಕನ್ನಡಿಗರಿಗೆ ಪರಿಚಯಿಸುವ ಈ ಪ್ರಬಂಧದಲ್ಲಿ ಸ್ವಾಮಿಜಿಯವರ ಬಹುಮುಖ ವ್ಯಕ್ತಿತ್ವದ ಒಂದು ಸೂಕ್ಷ್ಮ ಚಿತ್ರಣವನ್ನು ಕಾಣಬಹುದು. ಬಹುಶಃ Tata Research Institute ಅಥವಾ ಇಂದಿನ Indian Institute of Science ನ ಹಿಂದೆ ಸ್ವಾಮಿಜಿಯವರ ಹಾಗೂ ಸೋದರಿ ನಿವೇದಿತಾಳ ಪಾತ್ರ ಇರುವುದು ಇಂದಿನ ಜನರಿಗೆ ಅಪರಿಚಿತವೆಂದೆ ಹೇಳಬೇಕು. ಅದೂ ಅಲ್ಲದೆ ಹೊಸ ಹೊಸ ಚರಿತ್ರೆಯ ಪುಟಗಳು ಬಂದು ಸೇರುವಾಗ, ಇಂತಹ ಕೆಲವು ಅಸ್ಪಷ್ಟ ಪುಟಗಳು ಅಳಿದು ಒಮ್ಮೆಗೇ ಕಾಲಗರ್ಭದಲ್ಲಿ ಸೇರಿಬಿಡಬಹುದು. ಆದ್ದರಿಂದ ಸ್ವಾಮಿಜಿಯವರನ್ನು ಕುರಿತು ಉನ್ನತ ವ್ಯಾಸಂಗ ನಡೆಸುವವರಿಗೆ, ಅವರ ಭಕ್ತರಿಗೆ ಶ್ರೀಯುತ ಬಸು ನೀಡಿರುವ ಕಾಣಿಕೆ ಬಹಳ ಅಮೂಲ್ಯ. ಅವರ ಪರಿಶ್ರಮಕ್ಕೆ ಸ್ವಾಮೀಜಿಯವರ ಆರಾಧಕರು ಎಷ್ಟು ಕೃತಜ್ಞತೆಗಳನ್ನರ್ಪಿಸಿದರೂ ಸಾಲದು. ಈ ಲೇಖನ "ಪ್ರಬುದ್ಧ ಭಾರತದ" ಲ್ಲಿನ ಶ್ರೀಯುತ ಬಸು ಅವರ ಮೂಲ ಲೇಖನಗಳನ್ನು ಓದಲು ಆಸಕ್ತರಿಗೆ ದಿಕ್ಸೂಚಿಯಷ್ಟೆ.]

ಪ್ರಿಯ ಸ್ವಾಮಿ ವಿವೇಕಾನಂದ,

ಜಪಾನ್‌ನಿಂದ ಚಿಕಾಗೋವರೆಗಿನ ಹಡಗು ಪ್ರಯಾಣದ ಸಂದರ್ಭದಲ್ಲಿ ನಾನು ತಮ್ಮ ಸಹಪ್ರಯಾಣಿಕನಾಗಿದ್ದುದನ್ನು ತಾವು ಮರೆತಿಲ್ಲವೆಂದು ಭಾವಿಸುತ್ತೇನೆ. ಭಾರತದಲ್ಲಿ ಹೆಚ್ಚುತ್ತಿರುವ ಸಂನ್ಯಾಸ ಮನೋಭಾವ ಹಾಗೂ ಅದನ್ನು ಚಿವುಟಿಹಾಕಿ ಕೊಲ್ಲುವುದಕ್ಕಿಂತ ಅದಕ್ಕೆ ಒಂದು ಸನ್ಮಾರ್ಗ ತೋರುವ ನಿಮ್ಮ ಅಭಿಪ್ರಾಯಗಳನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ.

ಭಾರತದಲ್ಲಿ ವಿಜ್ಞಾನ ಸಂಶೋಧನಾ ಸಂಸ್ಥೆಯೊಂದನ್ನು ಸ್ಥಾಪಿಸುವ ನನ್ನ ಒಂದು ಕಲ್ಪನೆಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯಗಳನ್ನು ನಾನು ಸ್ಮರಿಸುತ್ತೇನೆ. ನನ್ನ ಈ ಯೋಜನೆಯನ್ನು ಈಗಾಗಲೇ ತಾವು ಕೇಳಿರಬಹುದು ಅಥವಾ ಓದಿರಬಹುದು. ಸನ್ಯಾಸ ಮನೋಭಾವದವರಿಗೆ ಮಠಗಳನ್ನೋ ಅಥವಾ ವಾಸ ಮಾಡಲು ಯೋಗ್ಯವಾದ ದೊಡ್ಡ ಕೊಠಡಿಗಳನ್ನೋ ಕಟ್ಟಿಸುವುದು; ಅಲ್ಲಿ ಅವರು ಸಭ್ಯಜೀವನ ನಡೆಸುತ್ತ, ತಮ್ಮ ಜೀವನವನ್ನು ನೈಸರ್ಗಿಕ ಹಾಗೂ ಮಾನವೀಯ ವಿಜ್ಞಾನಗಳ ಬೆಳವಣಿಗೆಗಾಗಿ, ಮುಡಿಪಾಗಿಡುವುದು; ಸನ್ಯಾಸ ಮನೋಭಾವದ ಸದುಪಯೋಗಕ್ಕೆ ಇದಕ್ಕಿಂತ ಉತ್ತಮವಾದ ಬೇರೊಂದು ಮಾರ್ಗ ನನಗೆ ಹೊಳೆಯುತ್ತಿಲ್ಲ. ಯಾರಾದರೂ ಒಬ್ಬ ಸಮರ್ಥ ನಾಯಕನು ಇಂತಹ ಸನ್ಯಾಸದ ಪರವಾಗಿ ಜೈತ್ರಯಾತ್ರೆಯನ್ನು ಕೈಗೊಂಡಲ್ಲಿ, ಇದರಿಂದ ಸನ್ಯಾಸಕ್ಕೂ, ವಿಜ್ಞಾನಕ್ಕೂ ಬಹಳ ಉಪಯೋಗವಾಗುವುದಲ್ಲದೆ, ದೇಶಕ್ಕೂ ಒಂದು ಒಳ್ಳೆಯ ಹೆಸರು ಬರುತ್ತದೆ ಎಂಬುದು ನನ್ನ ಅಭಿಪ್ರಾಯ. ಇಂತಹ ಜೈತ್ರಯಾತ್ರೆಗೆ ವಿವೇಕಾನಂದರಿಗಿಂತ ಉತ್ತಮ ನಾಯಕನು ಬೇರೆ ಯಾರೂ ದೊರಕಲಾರನೆಂದೆ ನನ್ನ ಭಾವನೆ. ನಮ್ಮ ಪುರಾತನ ಸಂಪ್ರದಾಯಗಳಿಗೆ ಜೀವ ತುಂಬುವ ಈ ಧ್ಯೇಯಕ್ಕೆ ತಮ್ಮನ್ನು ತೊಡಗಿಸಿಕೊಳ್ಳಬಹುದೆಂದು ಎನಿಸುತ್ತದೆಯೆ? ಈ ನಿಟ್ಟಿನಲ್ಲಿ ಜನರನ್ನು ಜಾಗೃತಿಗೊಳಿಸುವ ಅಗ್ನಿಸದೃಶ ಕರಪತ್ರಗಳನ್ನು ಬಳಸುವುದರ ಮೂಲಕ ತಾವು ಇದನ್ನು ಪ್ರಾರಂಭಿಸಬಹುದು. ಆ ಕರಪತ್ರಗಳ ಪ್ರಕಟನೆಗೆ ಬೇಕಾಗುವ ಎಲ್ಲ ಖರ್ಚುವೆಚ್ಚಗಳನ್ನು ನಾನು ಸಂತೋಷದಿಂದ ಭರಿಸುತ್ತೇನೆ.

೨೩ನೇ ನವೆಂಬರ್ ೧೮೯೮ — ನಿಮ್ಮ ವಿಶ್ವಾಸಿ,

ಎಸ್ಪ್ಲನೇಡ್ ಹೌಸ್, ಬಾಂಬೆ — ***ಜೆಮ್‌ಶೇಟ್‌ಜಿ ಎನ್. ಟಾಟಾ***

ಈ ಮೇಲಿನ ಪತ್ರದಿಂದ ನಮಗೆ ಕೆಲವು ವಿಷಯಗಳು ಸ್ಪಷ್ಟವಾಗುತ್ತವೆ. ಮೊದಲನೆಯದಾಗಿ, ಜಪಾನ್‌ನಿಂದ ಚಿಕಾಗೋಗೆ ಪಯಣಿಸುತ್ತಿದ್ದ ಹಡಗಿನಲ್ಲಿ ಸ್ವಾಮಿ ವಿವೇಕಾನಂದರ ಸಹಪ್ರಯಾಣಿಕರಾಗಿ ನವಭಾರತದ ಔದ್ಯೋಗಿಕ ಕ್ಷೇತ್ರದ ಅಧ್ವರ್ಯುವಾದ ಶ್ರೀ ಜೆಮ್‌ಶೇಟ್‌ಜಿ ಎನ್.ಟಾಟಾರವರಿದ್ದರು. ಎರಡನೆಯದಾಗಿ, ಅವರಿಬ್ಬರ ನಡುವೆ ಭಾರತದ ಶೈಕ್ಷಣಿಕ, ಔದ್ಯೋಗಿಕ, ಸನ್ಯಾಸ ಜೀವನದ ಕುರಿತಾಗಿ ಗಹನವಾದ

ವಿಚಾರವಿನಿಮಯ ನಡೆದಿತ್ತು. ಮೂರನೆಯದಾಗಿ, ಜೆಮ್‌ಶೇಟ್‌ಜಿಯವರು ಭಾರತದಲ್ಲಿ ಸ್ವತಂತ್ರವಾದ, ಇಲ್ಲಿನ ಧ್ಯೇಯೋದ್ದೇಶಗಳಿಗೆ ಹೊಂದುವ, ಉನ್ನತ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವ ಯೋಜನೆಯನ್ನು ಹಾಕಿಕೊಂಡಿದ್ದು. ಅದಕ್ಕಾಗಿ ಭಾರತದಲ್ಲಿ ಎಲ್ಲೆಡೆ ಸಂಚರಿಸಿ ಜನಮನ ಗೆದ್ದಿದ್ದ ಸ್ವಾಮಿ ವಿವೇಕಾನಂದರ ಮೂಲಕ ತಮ್ಮ ಯೋಜನೆಗೆ ಭಾರತದ ಜನರ ಸಹಾನುಭೂತಿ, ಸಹಕಾರವನ್ನು ಕೋರಲು ಇಚ್ಛಿಸಿದ್ದರು.

ಅಂದಿನ ಕಾಲದ ವಿದ್ಯಾಭ್ಯಾಸ ಪದ್ಧತಿಯನ್ನು ಖಂಡಿಸುತ್ತ ಸ್ವಾಮಿ ವಿವೇಕಾನಂದರು ಶ್ರೀ ಪ್ರಿಯನಾಥ ಸಿನ್ಹರಿಗೆ ಹೇಳುತ್ತಾರೆ: 'ನಮ್ಮ ಶಿಕ್ಷಣತಜ್ಞರು ಹುಡುಗರನ್ನು ಗಿಳಿಗಳನ್ನಾಗಿಸುತ್ತಿದ್ದಾರೆ. ಅವರ ತಲೆಯ ತುಂಬ ಹತ್ತು-ಹಲವು ವಿಷಯಗಳನ್ನು ತುಂಬಿ ಅವರನ್ನು ವಿನಾಶದೆಡೆಗೆ ಒಯ್ಯುತ್ತಿದ್ದಾರೆ. ಒಂದು ವಿಧದಲ್ಲಿ ನಾವು ಈಗಿನ ವೈಸ್‌ರಾಯ್‌ಗೆ ಬಹಳ ಆಭಾರಿಯಾಗಿರಬೇಕು. ಅವರೀಗ ಪ್ರಸ್ತುತ ವಿಶ್ವವಿದ್ಯಾಲಯದ ಸುಧಾರಣೆಯನ್ನು ಮುಂದಿಟ್ಟಿದ್ದಾರೆ. ಅದರಿಂದ ಬಹಳ ಮಂದಿಗೆ ಉನ್ನತ ಶಿಕ್ಷಣವು ಎಟುಕದೆ ಹೋಗುತ್ತದೆ... ಅಬ್ಬಬ್ಬ! ಪದವಿ ಗಳಿಸಲು ಅದೇನು ಆತುರ, ಅದೇನು ಕಾತರತೆ, ಸ್ವಲ್ಪ ದಿನಗಳ ನಂತರ ಎಲ್ಲವೂ ತಣ್ಣಗೆ!.... ಉನ್ನತ ಶಿಕ್ಷಣವೆಂದರೆ ಕೇವಲ ವಸ್ತುವಿಜ್ಞಾನವನ್ನು ಓದಿ ದೈನಂದಿನ ಬಳಕೆಯ ವಸ್ತುಗಳನ್ನು ಯಂತ್ರಗಳ ಸಹಾಯದಿಂದ ಉತ್ಪಾದಿಸುವುದೆಂದೇನು? ಉನ್ನತ ಶಿಕ್ಷಣದ ಉದ್ದೇಶ, ಜೀವನದ ಸಮಸ್ಯೆಗಳನ್ನು ಹೇಗೆ ಬಗೆಹರಿಸಬೇಕೆಂದು ಕಂಡುಕೊಳ್ಳುವುದು. ಅದೇ ಈಗ ನಾಗರಿಕ ಜಗತ್ತನ್ನು ಗಾಢವಾಗಿ ಆಲೋಚಿಸುವಂತೆ ಮಾಡಿದೆ. ನಮಗೀಗ ಬೇಕಾಗಿರುವುದು ವಿದೇಶೀಯರ ಸ್ವಾಮ್ಯದಿಂದ ಮುಕ್ತವಾಗಿ ಭಾರತೀಯ ಜ್ಞಾನವನ್ನು ಅಧ್ಯಯನ ಮಾಡುವುದು, ಅದರೊಂದಿಗೆ ಪಾಶ್ಚಾತ್ಯ ವಿಜ್ಞಾನ ಮತ್ತು ಇಂಗ್ಲಿಷ್ ಭಾಷೆಗಳ ಜ್ಞಾನ. ನಮಗೆ ತಾಂತ್ರಿಕ ಶಿಕ್ಷಣ ಬೇಕು ಮತ್ತು ನಮ್ಮ ಕೈಗಾರಿಕೆಗಳನ್ನು ಬೆಳೆಸುವಂತಹ ಶಿಕ್ಷಣ ಬೇಕು. ಇದರಿಂದ ಜನರು ಇನ್ನೊಬ್ಬರ ಕೆಳಗೆ ಚಾಕರಿ ಮಾಡಿ ಸಂಪಾದಿಸುವುದಕ್ಕಿಂತ ಹೆಚ್ಚು ಹೆಚ್ಚು ಹಣ ಸಂಪಾದಿಸಿ, ದೈನಂದಿನ ಬದುಕನ್ನೂ ನಡೆಸುವುದರ ಜೊತೆಗೆ ತಮ್ಮ ಕಷ್ಟಕಾಲಕ್ಕೂ ಸಾಕಷ್ಟು ಸಂಪತ್ತನ್ನು ಕೂಡಿಡುವಂತಾಗಬೇಕು." ನಮ್ಮ ದೇಶದಲ್ಲಿ ಅಂತಹ ಒಂದು ಅವಕಾಶ ಇಲ್ಲದಿರುವುದನ್ನು ಮನಗಂಡ ಸ್ವಾಮಿಜಿ ಹೇಳುತ್ತಾರೆ, "ನನಗೆ ಇನ್ನೂ ಮದುವೆಯಾಗದ ಕೆಲವು ಮಂದಿ ಪದವೀಧರರು ಸಿಕ್ಕಲ್ಲಿ ಅವರನ್ನು ಜಪಾನಿಗೆ ಕಳಿಸಿ ಅವರಿಗೆ ತಾಂತ್ರಿಕ ಶಿಕ್ಷಣವನ್ನು ಕೊಡಿಸಬೇಕೆಂದುಕೊಂಡಿದ್ದೇನೆ. ಶಿಕ್ಷಣ ಪಡೆದ ಅವರು ತಮ್ಮ ಜ್ಞಾನವನ್ನು ಈ ದೇಶದ ಉನ್ನತಿಗಾಗಿ ವಿನಿಯೋಗಿಸುವರು."


ಜೆಮ್‌ಶೇಟ್‌ಜಿ ಎನ್. ಟಾಟಾ ಅವರ ಪ್ರತಿಮೆ

ಭಾರತದ ಇನ್ನೊಂದು ಮೂಲೆಯಲ್ಲಿ, ಹೆಚ್ಚು ಕಡಿಮೆ ಸ್ವಾಮಿ ವಿವೇಕಾನಂದರದ್ದೇ ಧಾಟಿಯಲ್ಲಿ ಈ ದೇಶದ ಹಿತವನ್ನು ಕುರಿತು ಚಿಂತಿಸುತ್ತಿದ್ದ ಇನ್ನೊಬ್ಬ ಮಹಾನ್ ನಾಯಕ ಜೆಮ್‌ಶೇಟ್‌ಜಿ. ಇವರು ಅತಿ ಸಣ್ಣವಯಸ್ಸಿನಲ್ಲೆ ನಾಯಕತ್ವದ ಹೊರೆ ಹೊತ್ತು ವ್ಯಾಪಾರ ಜಗತ್ತಿನ ಏರಿಳಿತಗಳ ಮೇಲೆ ಸ್ಥಿರವಾಗಿ ನಿಂತು, ಅದರಲ್ಲಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ್ದರು. ಜಗತ್ತಿನ ಆಲೋಚನೆಗಳೇ ಒಂದು ರೀತಿಯಾದರೆ ನಾಯಕನಾದವನು ಯೋಚಿಸುವುದೇ ಇನ್ನೊಂದು ಬಗೆಯಲ್ಲಿ. ಮೊದಲಿನಿಂದಲೂ, ವಿದೇಶಗಳಲ್ಲಿ ಸಂಚರಿಸಿದಾಗ ಎಲ್ಲಿಯಾದರೂ ಹೊಸತೊಂದು ಕಂಡರೆ, ಅದನ್ನು ಭಾರತೀಯರು ಅಳವಡಿಸಿಕೊಳ್ಳಬಹುದೇ ಎಂಬ ತವಕ ಜೆಮ್‌ಶೇಟ್‌ಜಿಯವರನ್ನು ಕಾಡುತ್ತಿತ್ತು. ಅದಕ್ಕಾಗಿ ಅವರು ವಿದೇಶಗಳಲ್ಲಿ ಸಂಚರಿಸುವುದನ್ನೇ ಒಂದು ರೂಢಿಯಾಗಿಸಿಕೊಂಡರು. ಹೊಸ ಹೊಸ ಮಾಹಿತಿಗಳಿಗಾಗಿ ವಿವಿಧ ಗ್ರಂಥಗಳನ್ನು ಓದುತ್ತಿದ್ದರು. ಸುಪ್ರಸಿದ್ಧ ವ್ಯಕ್ತಿಗಳು ನೀಡುವ ಭಾಷಣಗಳಿಗೆ ಹೋಗುತ್ತಿದ್ದರು. ಅವರೊಮ್ಮೆ ಇಂಗ್ಲೆಂಡಿನ ಥಾಮಸ್ ಕಾರ್ಲೈಲ್‌ರವರು ನೀಡಿದ ಭಾಷಣಕ್ಕೆ ಹೋಗಿದ್ದಾಗ, ಥಾಮಸ್‌ರವರ "*ಯಾವ ದೇಶವು ಉಕ್ಕಿನ ಮೇಲೆ ತನ್ನ ಆಧಿಪತ್ಯವನ್ನು ಹೊಂದುವುದೊ, ಅದು ಬಂಗಾರದ ಮೇಲೂ ತನ್ನ ಆಧಿಪತ್ಯವನ್ನು ಹೊಂದುವುದು ಖಂಡಿತ*" ಎಂದ ಯುಕ್ತಿಯುಕ್ತವಾದ ಮಾತು, ಅವರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿತು. ಮುಂದೆ ಇವರ ಅವಿರತ ಪ್ರಯತ್ನದಿಂದ ಭಾರತದಲ್ಲಿ ತಮ್ಮದೇ ಆದ ಕಬ್ಬಿಣ

ಮತ್ತು ಉಕ್ಕಿನ ಕಾರ್ಖಾನೆಯೊಂದನ್ನು ಅವರು ಅಸ್ತಿತ್ವಕ್ಕೆ ತಂದರು. ಭಾರತೀಯ ಕಾರ್ಖಾನೆಗಳಿಗೆ ಬೇಕಾದ ಜಲ-ವಿದ್ಯುಚ್ಛಕ್ತಿಯನ್ನು ತಯಾರಿಸುವುದರಲ್ಲೂ ಟಾಟಾರವರು ಹರಿಕಾರರಾದರು.

ಅಂದಿನ ಕಾಲದ ವಿಶ್ವವಿದ್ಯಾನಿಲಯಗಳು ಕೇವಲ ಪರೀಕ್ಷಾ ಕೇಂದ್ರಗಳಾಗಿ ಕೆಲಸ ನಿರ್ವಹಿಸುತ್ತಿದ್ದವು. ಜೆಮ್‌ಶೇಟ್‌ಜಿಯವರಿಗೆ ಉನ್ನತ ಶಿಕ್ಷಣಕ್ಕೆ ಒಂದು ವ್ಯವಸ್ಥೆಯನ್ನು ಕಲ್ಪಿಸುವ ಮನಸ್ಸಾದರೂ, ಅದರ ಕುರಿತಾದ ಸ್ಪಷ್ಟ ಕಲ್ಪನೆ ಯಾವುದೂ ಅವರ ಮನಸ್ಸಿಗೆ ಬರಲಿಲ್ಲ. ಇದಕ್ಕಾಗಿ ಬುರ್ಜೋರ್‌ಜಿ ಪಾದ್‌ಶಾಹ್‌ರನ್ನು ನೇಮಿಸಿ, ಐರೋಪ್ಯ ವಿಶ್ವವಿದ್ಯಾನಿಲಯಗಳಿಗೆ ಹೋಗಿ, ಅಲ್ಲಿನ ಶಿಕ್ಷಣತಜ್ಞರನ್ನು ಭೇಟಿ ಮಾಡಿ ತಮ್ಮ ಕಲ್ಪನೆಯ ಉನ್ನತ ಶಿಕ್ಷಣಕ್ಕೆ ಬೇಕಾದ ಮಾಹಿತಿಗಳನ್ನು ಸಂಗ್ರಹಿಸುವಂತೆ ಅವರಿಗೆ ತಿಳಿಸಿದರು. ಪಾದ್‌ಶಾಹರವರು ಸಂಗ್ರಹಿಸಿದ ತಜ್ಞರ ಅಭಿಪ್ರಾಯಗಳ ಪ್ರಕಾರ, ಜೆಮ್‌ಶೇಟ್‌ಜಿಯವರು ಯೋಜಿಸಿದ ಸ್ನಾತಕೋತ್ತರ ಶಿಕ್ಷಣ ಸಂಸ್ಥೆಯು ಮುಂಬೈನ ವಿಶ್ವವಿದ್ಯಾನಿಲಯಕ್ಕೇ ಹೊಂದಿಕೊಂಡಿದ್ದರೆ ಒಳಿತೆಂದಾಗಿತ್ತು. ಟಾಟಾರವರು ತಾವು ಓದಿದ ಎಲ್ಫಿನ್‌ಸ್ಟನ್ ಕಾಲೇಜನ್ನೇ ಒಂದು ಉನ್ನತ ಶಿಕ್ಷಣ ಕೇಂದ್ರವನ್ನಾಗಿ ಪರಿವರ್ತಿಸುವುದೆಂದೂ ಒಮ್ಮೆ ಯೋಚಿಸಿದ್ದುಂಟು. ಆದರೆ ಏತನ್ಮಧ್ಯೆ ತಮ್ಮ "ಸ್ವದೇಶಿ ಮಿಲ್"ನ ವ್ಯಾಪಾರಕೇಂದ್ರವನ್ನು ವಿದೇಶಗಳಿಗೆ ವಿಸ್ತರಿಸುವುದರಲ್ಲಿ ಅವರ ಗಮನ ಹರಿಯಿತು. ತಮ್ಮ ಯೋಜನೆಯು ಕಾರ್ಯಗತವಾಗಲು ಇನ್ನೂ ಕಾಯಬೇಕಾಗುವುದೆಂದು ಮನಗಂಡ ಅವರು ೧೮೯೨ರಲ್ಲಿ ಭಾರತದ ಯುವಕರನ್ನು ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಲು ಯೋಚಿಸಿ ಒಂದು ನ್ಯಾಸಪತ್ರವನ್ನು (trust deed) ಸಿದ್ಧಪಡಿಸಿದರು. ಅಭ್ಯರ್ಥಿಗಳ ಆಯ್ಕೆಯಲ್ಲಿ ಪಕ್ಷಪಾತ ಉಂಟಾಗಬಾರದೆಂದು ಒಂದು ಸಮಿತಿಯನ್ನು ರಚಿಸಲಾಯಿತು. ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರನ್ನು, ಉನ್ನತ ಆಡಳಿತಾತ್ಮಕ ಹಾಗೂ ತಾಂತ್ರಿಕ ಸೇವೆಗಳಿಗೆ ಯೋಗ್ಯರನ್ನಾಗಿಸುವುದೇ ಅವರ ಉದ್ದೇಶವಾಗಿತ್ತು. ಹಣವನ್ನು ದಾನವಾಗಿ ಕೊಡುವುದಕ್ಕಿಂತ ಕಡಿಮೆ ಬಡ್ಡಿಯ ದರದಲ್ಲಿ, ಸಾಲದ ರೂಪದಲ್ಲಿ ಕೊಟ್ಟರೆ ಸದುಪಯೋಗವಾದೀತೆಂಬ ನಂಬಿಕೆ ಜೆಮ್‌ಶೇಟ್‌ಜಿಯವರದ್ದಾಗಿತ್ತು.

೧೮೯೩ರಲ್ಲಿ ಜೆಮಶೇಟ್‌ಜಿಯವರು ಜಪಾನಿಗೆ ಹೋದರು. ಜಪಾನ್‌ನಲ್ಲೂ ಸ್ವಾಮಿ ವಿವೇಕಾನಂದರ ಜೊತೆಗೆ ಇದ್ದರೆನಿಸುತ್ತದೆ. ಏಕೆಂದರೆ ಟಾಟಾರವರು "ಜಪಾನಿಯರಿಗೆ ಸ್ವಾಮಿಜಿಯವರನ್ನು ನೋಡಿ ಸಾಕ್ಷಾತ್ ಬುದ್ಧನನ್ನು ನೋಡಿದಂತಾಯಿತು" ಎಂದು ಸೋದರಿ ನಿವೇದಿತಾಗೆ ಹೇಳುತ್ತಾರೆ. ನಂತರ ಜೆಮ್‌ಶೇಟ್‌ಜಿಯವರು ಚಿಕಾಗೊವಿನ ಪ್ರಸಿದ್ಧ ವಸ್ತುಪ್ರದರ್ಶನಕ್ಕೂ ಹೋದರು. ಅವರು ಪ್ರಯಾಣ ಮಾಡಿದ ಹಡಗಿನಲ್ಲಿ ಸ್ವಾಮಿ ವಿವೇಕಾನಂದರೂ ಇದ್ದರು ಎಂದು ಈ ಮೇಲಿನ ಪತ್ರದಲ್ಲೇ ಜೆಮ್‌ಶೇಟ್‌ಜಿಯವರು ಸ್ಪಷ್ಟಪಡಿಸಿದ್ದಾರೆ. ಅವರಿಬ್ಬರ ಮಧ್ಯೆ ಅಂದಿನ ಭಾರತದ ಸಾಮಾಜಿಕ, ರಾಜಕೀಯ, ಧಾರ್ಮಿಕ ಸ್ಥಿತಿಗತಿಗಳ ಕುರಿತು ಚರ್ಚೆಗಳು ನಡೆದಿರಲೇಬೇಕೆಂದು ಊಹಿಸಬಹುದು. ಸ್ವಾಮಿಜಿಯ ಸಹೋದರ ಮಹೇಂದ್ರನಾಥ ದತ್ತರು ಸ್ವಾಮಿಜಿಯ ಜೀವನಕ್ಕೆ ಸಂಬಂಧಿಸಿದ ಘಟನೆಗಳನ್ನು ಕುರಿತು ಬರೆದಿದ್ದಾರೆ. "ಸ್ವಾಮಿಜಿಯ ಪತ್ರದಿಂದ (ಅವರ ಪತ್ರಸಂಕಲನದಲ್ಲಿ ಈ ಪತ್ರ ಇಲ್ಲ) ನಮಗೆ ತಿಳಿದು ಬರುವುದೇನೆಂದರೆ ಜಪಾನ್‌ನಿಂದ ಬೆಂಕಿಕಡ್ಡಿಗಳನ್ನು ಆಮದು ಮಾಡಿಕೊಂಡು ಅವುಗಳನ್ನು ಭಾರತದಲ್ಲಿ ಏಕೆ ಮಾರುತ್ತೀರೆಂದು ಸ್ವಾಮಿಜಿ ಶ್ರೀ ಟಾಟಾರವರನ್ನು ಕೇಳಿರುವುದು. ಇದರಿಂದ ರಾಷ್ಟ್ರೀಯ ಸಂಪತ್ತು ಹೆಚ್ಚು ಸೋರಿಹೋಗುವುದಲ್ಲದೆ ಟಾಟಾರವರಿಗೆ ಕಮಿಷನ್‌ನಿಂದ ದೊರಕಬಹುದಾದ ಆದಾಯವೂ ಅತ್ಯಲ್ಪವೆಂದೆ ಸ್ವಾಮೀಜಿಯವರ ವಿಚಾರವಾಗಿತ್ತು. ನಂತರ ಸ್ವಾಮಿಜಿ ಟಾಟಾರವರನ್ನು ಭಾರತದಲ್ಲೆ ಒಂದು ಬೆಂಕಿಕಡ್ಡಿ ಕಾರ್ಖಾನೆಯನ್ನು ತೆರೆಯುವಂತೆ ಕಳಕಳಿಯಿಂದ ಕೇಳಿಕೊಂಡರು. ಇದರಿಂದ ಮಾಲೀಕನಾದವನಿಗೆ ಒಳ್ಳೆಯ ಲಾಭ ದೊರೆಯುವುದರ ಜೊತೆಗೆ ದೇಶದ ಸಂಪತ್ತು ಸೋರಿಹೋಗುವುದು ತಪ್ಪುತ್ತದೆ."

೧೮೯೨ರ ಸುಮಾರಿಗೇ ಟಾಟಾರವರು ತಮ್ಮ ಉನ್ನತ ಶಿಕ್ಷಣದ ಆಲೋಚನೆಯನ್ನು ಒಂದು ಸಣ್ಣ ಪ್ರಮಾಣದಲ್ಲಿ ಕಾರ್ಯಗತಗೊಳಿಸಲು ತೊಡಗಿದ್ದರು ಎಂಬುದಾಗಿ ಅವರ ಜೀವನಚರಿತ್ರಕಾರರ ಬರಹಗಳಿಂದ ಗೊತ್ತಾಗುತ್ತದೆ (ನೋಡಿ *Jamsetji Tata*, B.Sh. Saklatvala and K. Khosla, Builders of Modern India Series, Publication Division, Minsitry of Information and Broadcasting, Government of India, Patiala House, New Delhi-1, p. 49). ಆದರೆ 1898ರ ನವೆಂಬರ್‌ನಲ್ಲಿ (ಅಂದರೆ ಅವರು ಸೆಪ್ಟೆಂಬರ್ ತಿಂಗಳಲ್ಲಿ ತಮ್ಮ ಯೋಜನೆಯನ್ನು ಬಹಿರಂಗಪಡಿಸಿದ ಮೇಲೆ) ಸ್ವಾಮಿಜಿಯವರಿಗೆ ಬರೆದ ಪತ್ರದಲ್ಲಿ, "ಭಾರತದ ಪುರಾತನ ಸಂಪ್ರದಾಯಗಳಿಗೆ ಜೀವ ತುಂಬುವ" ಕೆಲಸ ಆಗಬೇಕಾಗಿದೆಯೆಂದೂ ತಮ್ಮ ಯೋಜನೆಯನ್ನು ಸರ್ವಸಂಗ ಪರಿತ್ಯಾಗಿಗಳಾದ ಸನ್ಯಾಸಿಗಳು ನಿರ್ವಹಿಸಬೇಕೆಂಬ ಒಂದು ಆಲೋಚನೆಯನ್ನೂ ವ್ಯಕ್ತಪಡಿಸುತ್ತಾರೆ. ಇವು ಖಂಡಿತವಾಗಿಯೂ ಸ್ವಾಮಿ ವಿವೇಕಾನಂದರ ಮನೋಧರ್ಮವನ್ನೂ ಪ್ರತಿಬಿಂಬಿಸುತ್ತವೆ. ಬಹುಶಃ

ಸ್ವಾಮಿ ವಿವೇಕಾನಂದರು ಟಾಟಾರವರ ಬಳಿ ಇದನ್ನು ಪ್ರಸ್ತಾಪಿಸಿರಬೇಕು. ಅವರ ತಲೆಯಲ್ಲಿ ಇಂತಹದ್ದೊಂದು ಆಲೋಚನೆ ನಡೆಯುತ್ತಿತ್ತೆಂದು ನಂತರ ಅವರು ೧೮೯೭ರಲ್ಲಿ ರಾಮಕೃಷ್ಣ ಮಠದ ಧ್ಯೇಯವನ್ನು ಕುರಿತು ಬರೆದ ಲೇಖನಗಳಲ್ಲಿ ವ್ಯಕ್ತವಾಗುತ್ತವೆ. ಅಂದಿನ ಭಾರತದ ಪ್ರಗತಿಗೆ ಬೇಕಾದ ಲೌಕಿಕ-ತಾಂತ್ರಿಕ ಶಿಕ್ಷಣದ ಜೊತೆಗೆ ಆಧ್ಯಾತ್ಮಿಕತೆಯೂ ದೇಶದ ಬೆನ್ನೆಲುಬಾಗಬೇಕೆಂದು ಆಶಿಸಿದ್ದರು ಸ್ವಾಮೀಜಿ. ಅವರು ಬರೆಯುತ್ತಾರೆ: "ಈಗಿರುವ ಆಲೋಚನೆ ಏನೆಂದರೆ. ಈ ಮಠವನ್ನು ಹಂತಹಂತವಾಗಿ ಒಂದು ಸುಸಜ್ಜಿತ ವಿಶ್ವವಿದ್ಯಾನಿಲಯವನ್ನಾಗಿ ಪರಿವರ್ತಿಸುವುದು. ಇದರಲ್ಲಿ ಧಾರ್ಮಿಕ ಹಾಗೂ ತತ್ತ್ವಶಾಸ್ತ್ರೀಯ ವಿಷಯಗಳಿಗೆ ಆದ್ಯತೆ ನೀಡುವುದಲ್ಲದೆ, ಪೂರ್ಣವಾಗಿ ಸಜ್ಜುಗೊಂಡಿರುವ ಒಂದು ತಾಂತ್ರಿಕ ಶಿಕ್ಷಣ ಸಂಸ್ಥೆಯೂ ಇರುತ್ತದೆ. ಮೊದಲು ಇದಕ್ಕೆ ಗಮನ ಹರಿಸಿ ನಂತರ ಇನ್ನುಳಿದ ಶಾಖೆಗಳನ್ನು ಕ್ರಮಶಃ ಸೇರಿಸಲಾಗುವುದು. ಮಧ್ಯಭಾರತದಲ್ಲಿ, ಹಜ಼ಾರಿಬಾಗ್‌ನ ಸುತ್ತಮುತ್ತ, ಅಂತಹ ಬೇರೆ ಜಿಲ್ಲೆಗಳಲ್ಲಿ, ಫಲವತ್ತಾದ, ಒಳ್ಳೆಯ ನೀರಾವರಿ ಸೌಲಭ್ಯವಿರುವ ಜಮೀನಂತೂ ಹೆಚ್ಚು ತ್ರಾಸವಿಲ್ಲದೆ ಸಿಕ್ಕೇ ಸಿಗುತ್ತದೆ. ಅಲ್ಲೊಂದು ದೊಡ್ಡ ತುಂಡು ಜಮೀನನ್ನು ಪಡೆದು ಒಂದು ದೊಡ್ಡ ತಾಂತ್ರಿಕ ಶಿಕ್ಷಣ ಶಾಲೆಯನ್ನು ಕಟ್ಟುವುದು ಮತ್ತು ಕ್ರಮಶಃ ಕಾರ್ಯಾಗಾರಗಳು ಮುಂತಾದವು..."

ಇಲ್ಲಿ ಮಧ್ಯಪ್ರದೇಶದ ಹಜ಼ಾರಿಬಾಗನ್ನು ಸೂಚಿಸಿರುವುದು ಆಶ್ಚರ್ಯಕರವಾಗಿದೆ. ಏಕೆಂದರೆ ಮುಂದೆ ಅದೇ ಕ್ಷೇತ್ರದಲ್ಲಿ ಜೆಮ್‌ಶೆಡ್‌ಪುರದ ವಸಾಹತುಗಳು ಮತ್ತು ಟಾಟಾರವರ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟವು. ಇದರಿಂದ ಸ್ವಾಮಿಜಿಯವರು ತಮ್ಮ ಪರಿವ್ರಾಜಕ ದಿನಗಳಲ್ಲಿ ದೇಶದ ಖನಿಜ ಸಂಪನ್ಮೂಲಗಳ ಕುರಿತು ವಿಸ್ತೃತ ಮಾಹಿತಿಯನ್ನು ಸಂಗ್ರಹಿಸಿಟ್ಟುಕೊಂಡಿದ್ದರು ಎಂದು ಊಹಿಸಬಹುದು, ಅಥವಾ ಬೇರೆ ಕೆಲವು ಮೂಲಗಳಿಂದಲೂ ಸಂಗ್ರಹಿಸಿರಬಹುದು. ಅವರಿಗೆ ವಿವಿಧ ವಿಷಯಗಳಲ್ಲಿ ಇದ್ದ ಆಸಕ್ತಿ ಅವರ ಜೀವನಚರಿತ್ರೆಯನ್ನು ಓದಿದಾಗ ತಿಳಿದುಬರುತ್ತದೆ. ಅವರು ಅಮೆರಿಕದ ಚಿಕಾಗೋ ಸಮ್ಮೇಳನದಲ್ಲಿ ಭಾಗವಹಿಸುವ ಮೊದಲೇ ನ್ಯೂಯಾರ್ಕ್‌ನ ಸಾರಾಟೋಗಾದಲ್ಲಿ ಅಮೆರಿಕನ್ ಸೋಷಿಯಲ್ ಸೈನ್ಸ್ ಅಸೋಸಿಯೇಶನ್ನಿನ ಸದಸ್ಯರ ಮುಂದೆ ಸೆಪ್ಟೆಂಬರ್ ಎರಡು "ಭಾರತದಲ್ಲಿ ಬೆಳ್ಳಿಯ ಬಳಕೆ" ಎಂಬ ವಿಷಯದ ಮೇಲೆ ಮಾತನಾಡಿದ್ದರು. ಮುಂದೆ ಹಜ಼ಾರಿಬಾಗ್‌ನಲ್ಲಿ ಟಾಟಾ ಕೈಗಾರಿಕೆಯು ಸ್ಥಾಪಿಸಲ್ಪಟ್ಟಿದ್ದರಿಂದ ಸ್ವಾಮೀಜಿಯವರ ಕನಸು ಹೀಗಾದರೂ ನನಸಾಯಿತೆಂದು ಶ್ರೀ ಶಂಕರಿಪ್ರಸಾದ್ ಬಸು ಬರೆಯುತ್ತಾರೆ.

(ಮುಂದುವರೆಯುವುದು)

## 'ಕೇವಲ ಶರಣಾಗತಿ, ಶರಣಾಗತಿ ಅಷ್ಟೇ'



ಒಂದು ರಾತ್ರಿ ಸ್ವಾಮಿ ಬ್ರಹ್ಮಾನಂದರು ಬಲರಾಮನ ಮನೆಯಲ್ಲಿ ವಾಸವಾಗಿದ್ದಾಗ, ಇದ್ದಕ್ಕಿದ್ದಂತೆ ಅವರಿಗೆ ಶ್ರೀರಾಮಕೃಷ್ಣರ ದರ್ಶನವಾಯಿತು. ಶ್ರೀರಾಮಕೃಷ್ಣರು ಏನನ್ನೂ ಹೇಳದೆ ಕಾಣಿಸಿಕೊಂಡಂತೆಯೇ ಅದೃಶ್ಯರಾದರು. ಬ್ರಹ್ಮಾನಂದರು ಹಾಸಿಗೆಯ ಮೇಲೆ ಎದ್ದು ಕುಳಿತು ಈ ದರ್ಶನದ ಅರ್ಥವೇನು ಎಂದು ಧ್ಯಾನಿಸಿದರು. ನಂತರ ಸೇವಕನನ್ನು ಕರೆದು, "ಇದ್ದಕ್ಕಿದ್ದಂತೆ ನನ್ನ ನಿದ್ರೆ ಭಂಗವಾಯಿತು, ನೋಡಿದರೆ ಹಾಸಿಗೆಯ ಪಕ್ಕದಲ್ಲಿ ಶ್ರೀರಾಮಕೃಷ್ಣರು ನಿಂತಿದ್ದಾರೆ. ಆದರೆ ಒಂದು ಮಾತನ್ನೂ ಆಡಲಿಲ್ಲ. ಹೀಗೆ ಕಾಣಿಸಿದ್ದೇಕೆ, ಅದೃಶ್ಯರಾದ್ದೇಕೆ ಎಂಬುದೇ ಅರ್ಥವಾಗುತ್ತಿಲ್ಲ" ಎಂದು ಹೇಳಿದರು. ಸ್ವಲ್ಪ ತಡೆದು, ಗಂಭೀರವಾಗಿ "ನನ್ನ ಮನಸ್ಸಿನಲ್ಲಿ ಯಾವ ಆಸೆಯೂ ಉಳಿದಿಲ್ಲ. ಅವರ ಹೆಸರನ್ನು ಉಚ್ಚರಿಸುವ ಆಸೆಯೂ ಇಲ್ಲ; ಕೇವಲ ಶರಣಾಗತಿ, ಶರಣಾಗತಿ ಅಷ್ಟೇ" ಎಂದರು.

## 'ಭಯಪಡಬೇಡ, ಹೆದರದೆ ಆಟವಾಡು'



ಒಂದು ಸಲ ಹರಿನಾಥನು (ಮುಂದೆ ಸ್ವಾಮಿ ತುರೀಯಾನಂದರು) ಈ ಜನ್ಮದಲ್ಲಿಯೇ ಮುಕ್ತಿಯನ್ನು ಪಡೆಯುವುದೇ ನನ್ನ ಗುರಿ ಎಂದು ಶ್ರೀರಾಮಕೃಷ್ಣರಿಗೆ ಹೇಳಿದನು. ಅದಕ್ಕೆ ಶ್ರೀರಾಮಕೃಷ್ಣರು "ಯಾರು ನಿರ್ವಾಣವನ್ನು ಇಚ್ಛಿಸುವರೋ ಅವರು ಸ್ವಾರ್ಥಿಗಳು; ಅವರದು ಸಣ್ಣ ಮನಸ್ಸು. ಅವರು ಭಯದಿಂದ ತುಂಬಿಹೋಗಿರುವರು. ಅವರು ಮನೆಗೆ ಹೋಗಲು ಆತುರದಿಂದಿರುವ ಆಟಗಾರರ ಹಾಗೆ... ಇನ್ನೂ ಆಟವನ್ನು ಕಲಿಯುತ್ತಿರುವವನು, ಹಣ್ಣಾದ ಒಂದು ಕಾಯಿಯನ್ನು ಪುನಃ ಇಳಿಸಲು ಇಷ್ಟಪಡುವುದಿಲ್ಲ.. ಆದರೆ ಆಟ ಚೆನ್ನಾಗಿ ಗೊತ್ತಿರುವವನು ಕಾಯಿಯನ್ನು ಪುನಃ ಪ್ರಯೋಗಿಸಲು ಭಯಪಡುವುದಿಲ್ಲ; ಅನಂತರ ಅವನು ಸರಿಯಾಗಿ ದಾಳ ಉರುಳಿಸಿ ತನ್ನ ಕಾಯಿಗಳನ್ನೆಲ್ಲ ಹಣ್ಣು ಮಾಡುತ್ತಾನೆ. ಆದ್ದರಿಂದ ನೀನು ಭಯಪಡಬೇಡ. ಹೆದರದೆ ಆಟವಾಡು" ಎಂದರು. ಹರಿನಾಥನು "ಸ್ವಾಮಿ, ಹಾಗೆ ನಿಜವಾಗಿಯೂ ಆಗುವುದೇ?" ಎನ್ನಲು, ಶ್ರೀರಾಮಕೃಷ್ಣರೆಂದರು "ಖಂಡಿತ ಆಗುತ್ತದೆ. ತಾಯಿಯ ಕೃಪೆಯಿಂದ ಎಲ್ಲವೂ ಸಾಧ್ಯ".